ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 1925

ಉತ್ತರಿಸಬೇಕಾದ ದಿನಾಂಕ : 16.03.2022.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ	ಕೋಳಿ ಸಾಕಾಣೆಯನ್ನು ಕೃಷಿ ಎಂದು ಪರಿಗಣಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಕೋಳಿ ಸಾಕಾಣಿಕೆಯನ್ನು ರಾಜ್ಯಾದ್ಯಂತ ರೈತರು ಉಪ ಕಸುಬನ್ನಾಗಿ ಹಾಗೂ ಕೆಲವು ರೈತರು ಗರಿಷ್ಠ ಪ್ರಮಾಣದಲ್ಲಿ ಕೋಳಿ ಸಾಕಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೋಳಿ ಸಾಕಾಣಿಕೆಯನ್ನು ರಾಜ್ಯದಾದ್ಯಂತ ರೈತರು ಉಪಕಸುಬನ್ನಾಗಿ ಹಾಗೂ ಕೆಲವು ರೈತರು ಗರಿಷ್ಠ ಪ್ರಮಾಣದಲ್ಲಿ ಕೋಳಿ ಸಾಕಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. 1961 ರ ಕರ್ನಾಟಕ ಭೂ ಸುಧಾರಣೆ ಕಾಯಿದೆ 2(1)(ಡಿ)ಅಡಿಯಲ್ಲಿ ಕೋಳಿ ಸಾಕಾಣಿಕೆಯನ್ನು ಕೃಷಿ ಚಟುವಟಿಕೆ ಎಂದು ಒಳಗೊಂಡಿರುತ್ತದೆ.
ಆ	ಕೋಲಾರ/ಚಿಕ್ಕಬಳ್ಳಾಪುರ ಜಿಲ್ಲೆಯಂತಹ ಕೃಷಿ ಆಧಾರಿತ ಜಿಲ್ಲೆಗಳಲ್ಲಿ ಕೋಳಿ ಸಾಕಾಣಿಕೆಯನ್ನು ಉತ್ತೇಜಿಸಲು ಸರ್ಕಾರ ಯಾವುದಾದರೂ ವಿಶೇಷ ಯೋಜನೆಗಳನ್ನು ರೂಪಿಸಿದೆಯೇ; (ಹಾಗಿದ್ದಲ್ಲಿ, ವಿಶೇಷ ಯೋಜನೆಗಳ ಸಂಪೂರ್ಣ ಮಾಹಿತಿಯನ್ನು ನೀಡುವುದು)	ಕೋಲಾರ/ಚಿಕ್ಕಬಳ್ಳಾಪುರ ಜಿಲ್ಲೆಯಂತಹ ಕೃಷಿ ಆಧಾರಿತ ಜಿಲ್ಲೆಗಳಲ್ಲಿ ಕೋಳಿ ಸಾಕಾಣಿಕೆಯನ್ನು ಉತ್ತೇಜಿಸಲು ಸರ್ಕಾರದಿಂದ ಯಾವುದೇ ವಿಶೇಷ ಯೋಜನೆಗಳು ರೂಪಿಸಿರುವುದಿಲ್ಲ. 2021-22 ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರೀಯ ಜಾನುವಾರು ಅಭಿಯಾನ (ಎನ್‌ಎಲ್‌ಎಂ) ಯೋಜನೆಯಡಿಯಲ್ಲಿ **"ಉದ್ಯಮಮಿತ್ರ"** ನೂತನ ಯೋಜನೆಯನ್ನು ಘೋಷಣೆ ಮಾಡಿರುತ್ತದೆ. ಈ ಯೋಜನೆಯಡಿಯಲ್ಲಿ ಉದ್ಯಮಶೀಲತೆ ಸ್ಥಾಪನೆಗಾಗಿ ಯೋಜನೆಯ ವೆಚ್ಚಕ್ಕಾಗಿ 50% ಬಂಡವಾಳ ಸಹಾಯಧನವನ್ನು (ಗರಿಷ್ಟ ರೂ.25.00 ಲಕ್ಷದವರೆಗೆ) ಪಡೆಯಬಹುದಾಗಿದೆ. ಗ್ರಾಮೀಣ/ಕೋಳಿ ಸಾಕಾಣಿಕೆಯ ಉದ್ಯಮಶೀಲತೆಯಿಂದ ಹ್ಯಾಚರಿ ಮತ್ತು ಕಾವು ವ್ಯವಸ್ಥೆ ಒಳಗೊಂಡಂತೆ 1000 ದೇಸಿ ಮಾತೃ ಮೊಟ್ಟೆ ಕೋಳಿ ಘಟಕ ಸ್ಥಾಪನೆಗಾಗಿ ಸಹಾಯಧನ ನೀಡುತ್ತಿದೆ. ಈ ಕಾರ್ಯಕ್ರಮದ ಲಾಭವನ್ನು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ರೈತರು ಪಡೆಯಬಹುದಾಗಿದೆ..

ಇ	ರೈತರು ಕೋಳಿ ಸಾಕಾಣಿಕೆಯನ್ನು ಮಾಡಲು ವಿಶೇಷ ಬಡ್ಡಿ ದರದಲ್ಲಿ ಸರ್ಕಾರ ಹಾಗೂ ಸಹಕಾರ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ, ಯಾವ ಯಾವ ಬ್ಯಾಂಕುಗಳಲ್ಲಿ ಸಾಲ ಸೌಲಭ್ಯವನ್ನು ಪಡೆಯಬಹುದಾಗಿದೆ; (ವಿವರಗಳನ್ನು ನೀಡುವುದು)	ರಾಜ್ಯ ಸರ್ಕಾರದಿಂದ ಕೋಳಿ ಸಾಕಾಣಿಕೆಗೆ ವಿಶೇಷ ಬಡ್ಡಿ ದರದಲ್ಲಿ ಸಾಲ ನೀಡುವ ಯಾವುದೇ ಯೋಜನೆಗಳು ಇರುವುದಿಲ್ಲ. ಆದರೆ, ಕೇಂದ್ರ ಸರ್ಕಾರವು ಎನ್‌ಎಲ್‌ಎಂ ಯೋಜನೆಯಡಿಯಲ್ಲಿ ಉದ್ಯಮಶೀಲತೆಯ ಸ್ಥಾಪನೆಗಾಗಿ ಯೋಜನೆಯ ವೆಚ್ಚಕ್ಕಾಗಿ 50% ಬಂಡವಾಳ ಸಹಾಯಧನವನ್ನು (ಗರಿಷ್ಠ ರೂ.25.00 ಲಕ್ಷದವರೆಗೆ) ಗ್ರಾಮೀಣ/ಕೋಳಿ ಸಾಕಾಣಿಕೆಯ ಉದ್ಯಮಶೀಲತೆಯಿಂದ ಹ್ಯಾಚರಿ ಮತ್ತು ಕಾವು ವ್ಯವಸ್ಥೆ ಒಳಗೊಂಡಂತೆ 1000 ದೇಸಿ ಮಾತೃ ಮೊಟ್ಟೆ ಕೋಳಿ ಘಟಕ ಸ್ಥಾಪನೆಗಾಗಿ ಸಹಾಯಧನ ನೀಡುತ್ತಿದೆ. ರಾಷ್ಟ್ರೀಕೃತ / ಸಹಕಾರಿ / ಷೆಡ್ಯೂಲ್ / ಖಾಸಗಿ / ನಬಾರ್ಡ್ ಬ್ಯಾಂಕುಗಳ ಮುಖಾಂತರ ಆಯ್ಕೆಯಾದ ಫಲಾನುಭವಿಗಳು ಸಾಲ ಸೌಲಭ್ಯವನ್ನು ಪಡೆಯಬಹುದಾಗಿದೆ.
ಈ	ಕೋಳಿ ಸಾಕಾಣಿಕೆ ಕೇಂದ್ರಗಳಲ್ಲಿ ಕೋಳಿಗಳಿಗೆ ಬರುವ ಕೆಲವು ಖಾಯಿಲೆಗಳನ್ನು ಪರೀಕ್ಷಿಸಲು ಜಿಲ್ಲಾ ಕೇಂದ್ರಗಳಲ್ಲಿ ವ್ಯವಸ್ಥಿತವಾದ ಪ್ರಯೋಗಾಲಯಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗಾಗಿ ಪ್ರಾರಂಭಿಸಲಾಗುವುದು? (ವಿವರಗಳನ್ನು ನೀಡುವುದು)	ಬೆಂಗಳೂರು ನಗರದ ಹೆಬ್ಬಾಳದಲ್ಲಿ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ಇದ್ದು, ಇಲ್ಲಿ ವಿವಿಧ ಖಾಯಿಲೆಗಳ ಪತ್ತೆಗಾಗಿ ವಿಶ್ಲೇಷಣೆ ಕಾರ್ಯಗಳು ನಡೆಯುತ್ತಿರುತ್ತವೆ. ರಾಜ್ಯದಲ್ಲಿ ಈಗಾಗಲೇ ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ಕಲ್ಬುರ್ಗಿ, ಮೈಸೂರು, ದಾವಣಗೆರೆ, ದಕ್ಷಿಣಕನ್ನಡ (ಮಂಗಳೂರು), ಶಿವಮೊಗ್ಗ, ತುಮಕೂರು (ಸಿರಾ), ಉತ್ತರ ಕನ್ನಡ (ಶಿರಸಿ), ಕೋಲಾರ ಜಿಲ್ಲೆಗಳಲ್ಲಿ ಪ್ರಾದೇಶಿಕ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಗಳಿದ್ದು, ಇದರ ಮುಖಾಂತರ ವಿವಿಧ ಖಾಯಿಲೆಗಳ ಪತ್ತೆಯ ವಿಶ್ಲೇಷಣೆ ಮಾಡಲಾಗುತ್ತಿದೆ. ರಾಯಚೂರು, ವಿಜಯಪುರ, ಕೊಪ್ಪಳ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ ನೂತನವಾಗಿ ಪ್ರಯೋಗಾಲಯಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ.

ಪಸಂಮೀ ಇ-83 ಸಲೆವಿ 2022

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು